ಶ್ರೀ ಕೆ. ಪುಟ್ಟಸ್ವಾಮಿ.—ಆಗ ಅಷ್ಟು ಕಾಲ ತೆಗೆದುಕೊಂಡಿರುವುದರಿಂದ ಈಗ ಕಡಿಮೆ ಕಾಲ ತೆಗೆದುಕೊಳ್ಳುತ್ತೇವೆ.

ಶ್ರೀ ಎನ್. ಎರ್. ಬೆಲ್ಲದ್.—ಉತ್ತರದಲ್ಲಿ ಕೊಟ್ಟಿರುವ ಪ್ರಕಾರ ಸರ್ಕಾರದ ಮಟ್ಟದಲ್ಲಿ ಈ ಆರೋಗ್ಯ ಕೇಂದ್ರಗಳನ್ನು ಸಿ. ಡಿ. ಪ್ರೋಗ್ರಾಂನಲ್ಲಿ ಅವರೇ ಮಂಜೂರು ಮಾಡತಕ್ಕ ಪ್ರಸಂಗ ಇರುವುದರಿಂದ ಈ ಮಂಜೂರಾತಿ ಕೊಡಲಿಕ್ಕೆ ಅವರು ಮೂರು ವರ್ಷ ಅವಧಿ ತೆಗೆದುಕೊಂಡಿದ್ದಾರೆ ಎಂದ ಮೇಲೆ ಇನ್ನು ಉಳಿದ ಸಿಬ್ಬಂದಿ ವರ್ಗದವರು ಈ ಫೈಲನ್ನು ಎಷ್ಟು ದಿವಸದವರೆಗೂ ಇಟ್ಟು ಕೊಳ್ಳಬಹುದು ? ಈ ಮೂರು ವರ್ಷದ ಕಾರಣವಧಿ ಏಕೆ ಬೇಕಾಯಿತು ?

ಶ್ರೀ ಕೆ. ಪುಟ್ಟಸ್ವಾಮಿ.—ಇದಕ್ಕೆ ಪಾಪ್ಯುಲರ್ ಕಾಂಟ್ರಿಬ್ಯೂಷನ್ ಹನ್ನೆರಡೂವರೆ ಸಾವಿರ ರೂಪಾಯಿ ಕೊಡಬೇಕು. ಈ ಒಂದು ಸ್ಥಳದಲ್ಲಿ ಕೊಟ್ಟಿದ್ದು 9 ಸಾವಿರ ರೂಪಾಯಿ, ಭೂಮಿ ಕೊಟ್ಟಿದ್ದಾರೆ, ಅದನ್ನು ವ್ಯಾಲ್ಯು ಮಾಡಿಸಿ ಇದನ್ನು ಒಂದು ಸ್ಪೆಷರ್ ಕೇಸ್ ಆಗಿ ಪರಿಗಣಿಸಿ ಹನ್ನೆರಡೂವರೆ ಸಾವಿರ ರೂಪಾಯಿ ಬಂದಿದೆ ಎಂದು ತೀರ್ಮಾನ ಮಾಡಿಕೊಂಡು ಕೊಟ್ಟಿದೆ. ಆದ್ದರಿಂದ ಸ್ವಲ್ಪ ನಿಧಾನವಾಗಿದೆ.

ಶ್ರೀ ಎನ್. ಎರ್. ಬೆಲ್ಲದ್.—1964ರಲ್ಲಿ ಪಂಚಾಯ್ತಿ ಕಮಿಟಿಯವರು ಭೂಮಿ ಕೊಟ್ಟಿದ್ದಾರೆ ಎಂಬುದನ್ನೂ ಕೂಡ ತಾವೇ ಹೇಳಿದ್ದೀರಿ, ಹಾಗೂ ಇಷ್ಟು ನಿಧಾನವಾಗುವುದಕ್ಕೆ ಕಾರಣವೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಹನ್ನೆರಡೂವರೆಸಾವಿರ ರೂಪಾಯಿ ಕ್ಯಾಷ್ ಕಾಂಟ್ರಿಬ್ಯೂಷನ್ ಕೊಡಬೇಕಾಗಿತ್ತು, ಕೊಟ್ಟಿದ್ದರೆ ಆಗಲೇ ಕೊಡುತ್ತಾ ಇದ್ದರು.

———

Health Unit Clinics in Tumkur District

*Q.—30. Sri B. GANGANNA (Kallambella).—Will the Minister for Health and Housing be pleased to state:—

(*a*) whether it is a fact that all the Health Vans given to Heallth Units in Tumkur District are being fully used for Family Planning Work alone and thereby the Public Health Protection in various Health Unit Clinics in the above District is not satisfactory ;

(*b*) whether they would give attention towards the proper working of these Health Unit Clinics in Tumkur District ?

A.—Sri K. PUTTASWAMY (Minister for Health and Housing).—

(*a*) No.
(*b*) Does not arise in view of reply to clause (*a*).

ಶ್ರೀ ಬಿ. ಗಂಗಣ್ಣ.—ಈ ಕ್ಲಿನಿಕ್‌ಗಳಲ್ಲಿ ಇರತಕ್ಕ ಅಧಿಕಾರಿಗಳು ಈ ಕೇಂದ್ರಗಳ ಕೆಲಸ ಕಾರ್ಯಗಳನ್ನು ಸರಿಯಾಗಿ ಗಮನಿಸದೆ ಕೆಲಸ ಕಾರ್ಯ ನಿಂತುಹೋಗಿದೆ ಎನ್ನುವುದಕ್ಕೆ ನನ್ನ ಕ್ಷೇತ್ರದಲ್ಲಿ ಎರಡು ನಿದರ್ಶನಗಳನ್ನು ಕೊಡುತ್ತೇನೆ. ಚೇಳೂರು ಹೋಬಳಿ ಅಳಲಘಟ್ಟ ಮತ್ತು ಸಿರಾದಲ್ಲಿ ರೇಡಿ ಡಾಕ್ಟ್‌ರುಗಳು ಇಲ್ಲದೆ ಕೆಲಸ ಕಾರ್ಯಗಳು ನಿಂತು ಹೋಗಿ ಜನಾರೋಗ್ಯಕ್ಕೆ ಬಹಳ ತೊಂದರೆಯಾಗಿದೆ, ಇದಕ್ಕೆ ತ ಏರ್ಪಾಡನ್ನು ಕೂಡಲೇ ಮಾಡಲಾಗುತ್ತದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಅದೇ ತರದೂದಿನಲ್ಲಿ ಇದ್ದೇವೆ. ಮೈನೂರು ರಾಜ್ಯದಲ್ಲಿ ಅನೇಕ ಹೆರಿಗೆ ಆಸ್ಪತ್ರೆಗಳಿಗೆ ಮಹಿಳಾ ವೈದ್ಯರು ಇಲ್ಲ, ಈಗ ಗೆಜೆಟೆಡ್ ನೌಕರರು ಸುಮಾರು 29 ಜನ ಇಲ್ಲ. ನಾನ್‌ಗೆಜೆಟೆಡ್ ನೌಕರರು ಸುಮಾರು 31 ಜನ ಇಲ್ಲ. ಆದಷ್ಟು ಜಾಗ್ರತೆ ಮಹಿಳಾ ವೈದ್ಯರನ್ನು ನೇಮಿಸಿ ಈ ಸ್ಥಳಕ್ಕೆ ಕೊಡಬೇಕೆನ್ನುವುದೇ ಸರ್ಕಾರದ ಆಪೇಕ್ಷೆಯಾಗಿದೆ. ಪಬ್ಲಿಕ್ ಸರ್ವೀಸ್ ಕಮೀಷನ್ ಅವರು ಅರ್ಜಿ ಕರೆದಿದ್ದಾರೆ, ಏಪ್ರಿಲ್ 19ಕ್ಕೆ ಆಖೈರು ದಿನವಾಗಿತ್ತು, ಎರ್ನಾ ಅರ್ಜಿಗಳು ಬಂದಿವೆ. ಬಹುಶಃ ಅವರು ಈ ಮಾಹೆಯಲ್ಲಿ ಆ ಅರ್ಜಿಗಳನ್ನೆಲ್ಲಾ ಪರಿಶೀಲನೆ ಮಾಡಿ ನೇಮಕ ಮಾಡಿಕೊಳ್ಳುವುದಕ್ಕೆ ಅನುಕೂಲ ಮಾಡಿಕೊಡುತ್ತಾರೆ.

ಶ್ರೀ ಬಿ. ಗಂಗಣ್ಣ.—ಕುಟುಂಬ ಯೋಜನೆ ಜಾರಿಗೆ ತಂದಿರುವ ಈ ತುಮಕೂರು ಜಿಲ್ಲೆಯಲ್ಲಿ ಎಷ್ಟು ಪರ್ಸೆಂಟ್ ಜನರು ಇದಕ್ಕೆ ಒಳಪಡುವಂತೆ ಮಾಡಲಾಗಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ನನ್ನ ಹತ್ತಿರ ಆ ಸಮಾಚಾರ ಈಗ ಇಲ್ಲ.

ಶ್ರೀ ಬಿ. ಗಂಗಣ್ಣ.—ಆರೋಗ್ಯ ಯೂನಿಟ್ಸುಗಳಿಗೆ ಕೊಟ್ಟಿರುವ ವಾಹನಗಳನ್ನು ಕುಟುಂಬ ಯೋಜನಾ ಕಾರ್ಯಗಳಿಗೆ ಉಪಯೋಗಿಸುತ್ತಾ ಇರುವುದರಿಂದ ಆ ಕೆಲಸಕ್ಕೆ ಅನಾನುಕೂಲವಾಗುವುದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಫ್ಯಾಮಿಲಿ ಪ್ಲಾನಿಂಗ್ ಹೆಲ್ತ್ ಯೂನಿಟ್ಟಿನ ಒಂದು ಭಾಗದ ಕೆಲಸ ವಾದುದರಿಂದ ಕೆಲವು ಸಾರಿ ಉಪಯೋಗಿಸಿಕೊಳ್ಳಬೇಕಾಗುತ್ತದೆ.

ಶ್ರೀ ಸಿ. ಕೆ. ರಾಜಯ್ಯಶೆಟ್ಟಿ.—ತುಮಕೂರಿನಲ್ಲಿ ಒಟ್ಟು ಎಷ್ಟು ಯೂನಿಟ್‌ಗಳಿವೆ ? ಅವರಿಗೆ ಯಾವ ಯಾವ ಕೆಲಸ ಮಾಡಬೇಕೆಂದು ಸರ್ಕಾರದ ನಿಯಮವಿದೆ ?

ಶ್ರೀ ಕೆ. ಪುಟ್ಟಸ್ವಾಮಿ.—ಜನರಗಳ ಆರೋಗ್ಯಕ್ಕೆ ಸಂಬಂಧಪಟ್ಟ ಕಾರ್ಯಗಳನ್ನು ಮಾಡಲು ಡಾಕ್ಟರುಗಳು ಇದ್ದಾರೆ. ಕ್ಲಿನಿಕ್‌ಗೆ ಹೋಗಲು, ಸಂಬಂಧಪಟ್ಟ ಹಳ್ಳಿಗಳಿಗೆ ಹೋಗಲು ವಾಹನಗಳನ್ನು ಉಪಯೋಗಿಸುತ್ತಾರೆ. ಕೆಲವು ಸಾರಿ ಕುಟುಂಬ ಯೋಜನಾ ಕಾರ್ಯಗಳಿಗೆ ವಾಹನಗಳನ್ನು ಉಪಯೋಗಿಸುತ್ತಾರೆ. ಈ ವಾಹನಗಳು ಎರಡು ಕೆಲಸಗಳಿಗೂ ಉಪಯೋಗವಾಗುತ್ತಿದೆ.

Sri M. MALLAPPA.—Has the Government taken steps for the supply of Health Vans to the General Hospitals in the State ?

Sri K. PUTTASWAMY.—No.

Sri M. MALLAPPA.—Is it not necessary that Health Units should be supplied with them ?

Sri K. PUTTASWAMY.—I shall examine it.

Sri AZEEZ SAIT.—How many Health Units are there in the District of Tumkur ?

Sri K. PUTTASWAMY.—I think 16.

Sri AZEEZ SAIT.—How many Health Vans are there at the disposal of the Department ?

Sri K. PUTTASWAMY.—Vans are provided for four units.

Sri AZEEZ SAIT.—I did not get reply to my question.

ಶ್ರೀ ಎಂ. ಕೆ. ಬೊಮ್ಮೇಗೌಡ.—ಎಷ್ಟೋ ಯೂನಿಟ್‌ಗಳಲ್ಲಿ ಡಾಕ್ಟರ್‌ಗಳು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಪುಟ್ಟಸ್ವಾಮಿ.—ಎಷ್ಟೋ ಯೂನಿಟ್‌ಗಳಲ್ಲಿ ಎಂದು ದೀರ್ಘವಾಗಿ ಹೇಳಿದರು. ಅದು ತಪ್ಪು, ಕೆಲವು ಕಡೆ ಇಲ್ಲ.

ಶ್ರೀ ಎ. ಮುನಿಯಪ್ಪ.—ವಾಹನಗಳನ್ನು ಕುಟುಂಬ ಯೋಜನೆ ಕೆಲಸಕ್ಕೆ ಉಪಯೋಗಿಸಬಹುದೆಂದು ಹೇಳಿದರು. ವ್ಯಾನ್‌ಗಳು ಎಷ್ಟು ಮೈಲಿ ಓಡಿತು ಎಂಬುದಕ್ಕೆ ಲಾಗ್ ಬುಕ್ ಏನಾದರೂ ಇದೆಯೆ ?

ಶ್ರೀ ಕೆ. ಪುಟ್ಟಸ್ವಾಮಿ.—ಪ್ರತಿಯೊಂದು ವ್ಯಾನ್‌ಗೂ ಲಾಗ್ ಬುಕ್ ಇದೆ.

ಶ್ರೀ ಎ. ಮುನಿಯಪ್ಪ.—ವ್ಯಾನ್‌ಗಳು ಎಷ್ಟು ಓಡಿದೆ ಎಂಬುದನ್ನು ಒಂದು ತಿಂಗಳು ಅಥವಾ ಮೂರು ತಿಂಗಳಿಗೆ ಒಂದು ಸಾರಿ ತನಿಖೆ ನಡೆಸುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ತನಿಖೆ ಮಾಡುವುದಕ್ಕೆ ವ್ಯವಸ್ಥೆ ಇದೆ.

ಶ್ರೀ ಎಂ. ಕೆ. ಬೊಮ್ಮೇಗೌಡ.—ಕೆಲವು ಯೂನಿಟ್‌ಗಳಲ್ಲಿ ಡಾಕ್ಟರ್‌ಗಳು ಇಲ್ಲವೆಂದು ಹೇಳಿದರು. ಇದಕ್ಕೆ ಕಾರಣವೇನು ? ಕೆಲವು ಡಾಕ್ಟರ್‌ಗಳು ರಜಾ ತೆಗೆದುಕೊಂಡು ವಾಪಸ್ ಬರದಿರುವುದು ಒಂದು ಕಾರಣವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಇದು ಜನರರ್ ಕ್ವಶ್ಚನ್. ರಜಾ ತೆಗೆದುಕೊಂಡು ವಾಪಸ್ ಬರದೇ ಇರುವವರು ಯಾರೂ ಇಲ್ಲ.